# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ
# ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ : 639/2021

ಪಿರ್ಯಾದುದಾರರು : ಕುದೂರು ಪೋಲಿಸ್ ಠಾಣೆ

**ವಿರುದ್ಧ**

**1 ನೇ ಆರೋಪಿ : ಪುಟ್ಟಚಾರ್**
**ಬಿನ್ ಶಿವಶಂಕರಚಾರ್,**
**45 ವರ್ಷಗಳು,**

**2 ನೇ ಆರೋಪಿ :** ದನಕನಚಾರ್
**ಬಿನ್ ಶಿವಶಂಕರಚಾರ್,**
**43 ವರ್ಷಗಳು,**

**3 ನೇ ಆರೋಪಿ : ತ್ರಿನೇತ್ರ ಚಾರ್**
**ಬಿನ್ ಶಿವಶಂಕರಚಾರ್,**
**38 ವರ್ಷಗಳು,**

**ವಾಸ- ಲಕ್ಷ್ಮೀದೇವಿ ನಗರ,**
**ಕುದೂರು ಟೌನ್,**
**ಮಾಗಡಿ ತಾಲ್ಲೂಕು.**

## <u>ದೋಷರೋಪಣೆ</u>

( ಶ್ರೀಮತಿ. ಧನಲಕ್ಷ್ಮಿ ಎಂ, ಅಪರ ನ್ಯಾಯಿಕ ದಂಡಾಧಿಕಾರಿಯಾದ ನಾನು ನಿಮ್ಮಗಳ ಮೇಲೆ ಈ ಕೆಳಕಂಡಂತೆ ದೋಷರೋಪಣೆ ಮಾಡುತ್ತಿದ್ದೇನೆ )

ದಿನಾಂಕ 10.10.2020 ರಂದು ಮಧ್ಯಾಹ್ನ 12.00 ಗಂಟೆಯ ಸಮಯದಲ್ಲಿ ಕುದೂರು ಪೊಲೀಸ್ ಠಾಣಾ ಸರಹದ್ದು, ಕುದೂರು ಹೋಬಳಿ, ಕೋಡಿಹಳ್ಳಿ ಗ್ರಾಮದ ಸರ್ವೇ ನಂ 29/2, 22/1, 181 ಜಮೀನಿನಲ್ಲಿ ಆರೋಪಿಯಾದ ನೀವು ಉಳುಮೆ ಮಾಡುತ್ತಿದ್ದಾಗ ಸ್ಥಳಕ್ಕೆ ಬಂದ ಸಾಕ್ಷಿ 1/ಲೋಕೇಶ್ ಮತ್ತು ಸಾಕ್ಷಿ2/ಬಸವಚಾರ್ ರವರು ಈ ಜಮೀನು ಓಎಸ್

ನಂ 91/20 ರಲ್ಲಿ, ದಾವೆ ಇರುತ್ತೆ. ಅದು ವಿಚಾರಣಾ ಹಂತದಲ್ಲಿರುವುದರಿಂದ ಈಗ ಜಮೀನನ್ನು ಉಳುಮೆ ಮಾಡುವುದು ಸರಿಯಲ್ಲ, ಕೋರ್ಟ್ ಆದೇಶದಂತೆ ನಡೆದುಕೊಳ್ಳಿ ಎಂದು ಹೇಳಿದ್ದಕ್ಕೆ ಆರೋಪಿಗಳಾದ ನೀವು ನಿಮ್ಮ ಅಪ್ಪನ ಹೆಸರಿನಲ್ಲಿ ಏನಾದರೂ ಇದ್ದರೆ ತೆಗೆದುಕೊಂಡು ಬಾ ಎಂದು ಏಕಾಏಕಿಯಾಗಿ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-504 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೇಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ನಿಮ್ಮಗಳಲ್ಲಿ 1 ನೇ ಆರೋಪಿ ಕುಡುಗೋಲಿನ ಹಿಮ್ಮಡಿಯಿಂದ ಸಾಕ್ಷಿ 1 ರವರ ಎಡಕೈ ಮೇಲೆ ಹಲ್ಲೆ ಮಾಡಿದ್ದು, ನಿಮ್ಮಗಳಲ್ಲಿ 2 ನೇ ಆರೋಪಿ ರವರು ದೊಣ್ಣೆಯಿಂದ ಸಾಕ್ಷಿ 1 ರವರ ಹಣೆಗೆ ಹೊಡೆದಿದ್ದು ಹಾಗೂ ನಿಮ್ಮಗಳಲ್ಲಿ 3 ನೇ ಆರೋಪಿಯು ಸಹಾ ದೊಣ್ಣೆಯಿಂದ ಮೈಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-324 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಕೊನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಸಾಕ್ಷಿ 1 ಮತ್ತು ಆತನ ಕುಟುಂಬದವರಿಗೆ ಕೊಲೆ ಬೆದರಿಕೆ ಹಾಕಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-506 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಪ್ರಶ್ನೆ-1 ಃ ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ, ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೆ?

**ಆರೋಪಿ-1 ರವರ ಉತ್ತರ ಃ**
**ಆರೋಪಿ-2 ರವರ ಉತ್ತರ ಃ**
**ಆರೋಪಿ-3 ರವರ ಉತ್ತರ ಃ**

ಪ್ರಶ್ನೆ-2 ಃ ನೀವು ನಿಮ್ಮ ತಪ್ಪನ್ನು ಒಪ್ಪುಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಇಚ್ಚಿಸುವಿರೋ ?

**ಆರೋಪಿ-1 ರವರ ಉತ್ತರ ः**
**ಆರೋಪಿ-2 ರವರ ಉತ್ತರ ः**
**ಆರೋಪಿ-3 ರವರ ಉತ್ತರ ः**

( ಈ ಮೇಲ್ಕಂಡ ದೋಷರೋಪಣೆಯನ್ನು ನೀವುಗಳು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲ ನಿರ್ದೇಶಿಸಿರುತ್ತೇನೆ )

( ಈ ಮೇಲ್ಕಂಡ ಆರೋಪಿತರುಗಳ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ )

( ಧನಲಕ್ಷ್ಮೀ ಎಂ )
ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.